ಶ್ರೀ ಎ. ಕೃಷ್ಣಪ್ಪ:- ಈಗಿರುವುದು ಬೇಕೆ ಅಥವಾ ಮುಂದಿನ ವರ್ಷದ್ದು ಬೇಕೆ?

ಶ್ರೀ ಜಿ. ರಾಜುಗೌಡ:- ಸ್ವಾಮಿ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿಗೆ ಪ್ರವೇಶ ಮಾಡಲಿಕ್ಕೆ ಸಾಧ್ಯವಿದೆ? ಅದನ್ನು ಹೇಳುವುದಕ್ಕಾಗದಿದ್ದರೆ ಆ ಮಾಹಿತಿಯನ್ನು ಕಳುಹಿಸಿಕೊಡಿ.

ಶ್ರೀ ಎ. ಕೃಷ್ಣಪ್ಪ:- ಕಳುಹಿಸಿ ಕೊಡುತ್ತೇನೆ.

ಶ್ರೀ ಜಿ. ರಾಜುಗೌಡ:- ಈಗ ಹಾಪ್‌ಕಾಮ್ಸ್ ಜಾಲವನ್ನು ತೋಟಗಾರಿಕೆ ಅಭಿವೃದ್ಧಿಗೆ ವಿಸ್ತರಿಸುತ್ತೀರಾ? ಹಾಪ್‌ಕಾಮ್ಸ್ ಜಾಲವೆಂದರೆ ಏನು? ಅದನ್ನು ಯಾವರೀತಿ ವಿಸ್ತರಿಸುತ್ತೀರಿ ಎನ್ನತಕ್ಕಂಥದ್ದು ಒಂದು ಪ್ರಶ್ನೆ. ಈ ತೋಟಗಾರಿಕೆ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲಿಕ್ಕೆ ತಾವು ವಿಶ್ವಬ್ಯಾಂಕ್‌ನಿಂದ ಎಷ್ಟು ನೆರವು ಪಡೆದಿರುತ್ತೀರಿ? ಯಾವ ಯಾವ ಸಂದರ್ಭದಲ್ಲಿ ಪಡೆದಿರುತ್ತೀರಿ?

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೇ ಹಾಪ್‌ಕಾಂ ಬಗ್ಗೆ ಅವರು ಕೇಳಿದ್ದಾರೆ. ಈಗ ಆ ಸಂಸ್ಥೆ ಜಾರಿಯಲ್ಲಿರುವುದು, ರೈತರು ಬೆಳೆದಂಥ ಮಾಲುಗಳೇನಿವೆ ಅದನ್ನು ಸಮಗ್ರವಾಗಿ ವಿತರಣೆ ಮಾಡಲಿಕ್ಕೆ ಅನುಕೂಲವಾಗಲಿ ಎನ್ನುವುದು ಒಂದು ವಿಚಾರ. ಅವರಿಗೆ ಮಾರಾಟ ಮಾಡಲಿಕ್ಕೆ ಹತ್ತಿರದ ಜಾಗಗಳಾಗಲಿ ಎನ್ನುವುದು ಎರಡನೇ ವಿಚಾರ. ಮೂರನೆಯದು ರೈತರು ಬೆಳೆದಂಥ ಬೆಳೆಗಳನ್ನು ಅವರು ದೂರ ಕೊಂಡೂಯ್ಯಲು ಹೋಗದೆ ಇದ್ದುದರಿಂದ ದಳ್ಳಾಳಿಗಳ ಮಧ್ಯದಲ್ಲಿ ಹೆಚ್ಚು ಹಣವನ್ನು ಕಳೆದುಕೊಳ್ಳುವಂಥ ಸಂಭವಗಳು ಇದ್ದುವು. ಅದನ್ನು ತಡೆಯಲಿಕ್ಕೆ ಈ ಸಂಸ್ಥೆ ಜಾರಿಯಲ್ಲಿದೆ. ಹಾಪ್‌ಕಾಮ್ಸ್‌ನದು ಲಿಮಿಟೆಡ್ ಆಕ್ಟಿವಿಟೀಸ್. ನಿನ್ನೆತಾನೆ ತಾವು ಪತ್ರಿಕೆಗಳಲ್ಲಿ ಓದಿರಬಹುದು. ಮೇಲಿನ ಮನೆಯಲ್ಲಿ ಈ ಪ್ರಶ್ನೆಯನ್ನು ಕೇಳಿದಾಗ ಇತರ ಜಿಲ್ಲೆಗಳಿಗೂ ವಿಸ್ತರಣೆ ಮಾಡುವಂಥ ಮೂರು ಮತ್ತು ನಾಲ್ಕನೇ ಎನ್.ಸಿ.ಡಿ.ಸಿ ಪ್ರೋಗ್ರಾಮ್ ಏನಿದೆ ಅದರಲ್ಲಿ ಮಿಕ್ಕ ಜಿಲ್ಲೆಗಳಿಗೆ ವಿಸ್ತರಣೆ ಮಾಡುತ್ತಿದ್ದೇವೆಂದು ಸರ್ಕಾರದ ಮೂಲಕ ಉತ್ತರ ಕೊಟ್ಟಿದ್ದೇವೆ. ಅದೇ ವಿಷಯದಲ್ಲಿ ಇವತ್ತು ಪತ್ರಿಕೆಗಳಲ್ಲೂ ಕೂಡ ಪ್ರಕಟಣೆಯಾಗಿದೆ.

ಶ್ರೀ ಜಿ. ರಾಜುಗೌಡ:- ಯಾವುದೇ ಒಂದು ರಾಜ್ಯದಲ್ಲಿ ತೋಟಗಾರಿಕೆ ಅತಿ ಹೆಚ್ಚಿನ ರೀತಿಯಲ್ಲಿ ಯಶಸ್ವಿಯಾಗಬೇಕಾದರೆ ರಾಜ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಾದಂಥ ಭೂಮಿ ಎಷ್ಟಿದೆಯೋ ಅದರಲ್ಲಿ ಶೇಕಡ ೧೨ ರಷ್ಟು ಭೂಮಿಯನ್ನು ತೋಟಗಾರಿಕೆ ಉತ್ಪನ್ನ ಬೆಳೆಯತಕ್ಕಂಥದಕ್ಕೆ ಮೀಸಲಿಡಬೇಕು. ದಯವಿಟ್ಟು ತಾವು ಆ ಒಂದು ಗುರಿಯನ್ನು ರೀಚ್ ಆಗಿದ್ದೀರಾ? ಆಗುವುದಕ್ಕೆ ತಾವು ಏನು ಮಾಡಬೇಕು?

ಶ್ರೀ ಎ. ಕೃಷ್ಣಪ್ಪ:- ನಮ್ಮ ರಾಜುಗೌಡರು ಹೇಳುವಂಥ ಒಂದು ಸಲಹೆ ಏನಿದೆ, ಆ ಗುರಿಯನ್ನು ಮುಟ್ಟಲಿಕ್ಕೆ ಆಗಲಿಲ್ಲ. ಕಾರಣವೇನೆಂದರೆ, ಇವತ್ತು ೧೭೪ ತಾಲ್ಲೂಕುಗಳಲ್ಲಿ ತೋಟಗಾರಿಕೆ ಆಕ್ಟಿವಿಟಿ ಏನಿದೆ ಅದನ್ನು ನಿಭಾಯಿಸಬೇಕಾದರೆ ಆಯವ್ಯಯದಲ್ಲಿ ಆರ್ಥಿಕ ಸಂಪನ್ಮೂಲಗಳ ತೊಂದರೆಯನ್ನು ನಾವು ಎದುರಿಸುತ್ತಿದ್ದೇವೆ. ಆದ್ದರಿಂದ ಇರುವಂಥ ಭೂಮಿಯನ್ನು ನಾವು ಅಭಿವೃದ್ಧಿ ಮಾಡಿ ಅದರಲ್ಲಿ ಸಾಕಷ್ಟು ಬೆಳೆಯನ್ನು ಇರುವ ಅವಕಾಶವನ್ನು ಬೆಟರ್ ಎಕ್ಸ್‌ಪ್ಲಾಯ್‌ಟೇಷನ್ ಮಾಡುವಂಥ ಒಂದು ಅವಕಾಶವನ್ನು ಕಲ್ಪನೆ ಮಾಡಲಿಕ್ಕೆ, ಕಲಿಸಲಿಕ್ಕೆ ಇದುವರೆಗೆ ಆಗಲಿಲ್ಲ. ಆದ್ದರಿಂದ ಮೊದಲನೆಯ ಆದ್ಯತೆ ಎಂದರೆ ಈಗ ನಮ್ಮ ವಶದಲ್ಲಿರುವಂಥ ತೋಟಗಾರಿಕೆ ಇಲಾಖೆ ಪ್ರದೇಶವೇನಿದೆ ಮೊದಲು ಅದನ್ನು ಒಂದು ಸರಿಯಾದ ಪರಿಸ್ಥಿತಿಗೆ ತಂದು ಇಡಬೇಕಾಗುತ್ತದೆ. ತದನಂತರ ತಾವು ಹೇಳಿರುವಂಥ ಸಲಹೆ ಕಡೆ ಸರ್ಕಾರ ಕೆಲಸ ಮಾಡಬೇಕಾಗುತ್ತದೆ.

ಅಧ್ಯಕ್ಷರು:- ಪ್ರಶ್ನೆ:- ೧೦೬ ಕ್ಕೆ ಮಂತ್ರಿಗಳು ಒಂದು ತಿಂಗಳು ಕಾಲಾವಕಾಶ ಬೇಕೆಂದು ಕೇಳಿಕೊಂಡಿದ್ದಾರೆ.

ಶ್ರೀ ಪಾಟಾಳ್ ನಾಗರಾಜ್:- ಇದಕ್ಕೆ ಕಾಲಾವಕಾಶ ಏತಕ್ಕೆ ಎಂದು ಗೊತ್ತಿಲ್ಲ. ಏಕೆಂದರೆ ಮೈಸೂರು ಹಾಲು ಒಕ್ಕೂಟದ ಪರಿಸ್ಥಿತಿ ಮಾನ್ಯ ಮಂತ್ರಿಗಳಿಗೆ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮೊದಲನೆಯ ಪ್ರಶ್ನೆಯಲ್ಲಿ ಕೇಳಿದ್ದುದು ಸರಿ. ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಚುನಾವಣೆ ಏತಕ್ಕೆ ನಡೆದಿಲ್ಲವೆಂದರೆ ಅದಕ್ಕೆ ತಕ್ಷಣ ಉತ್ತರಿಸುತ್ತೇನೆ. ೧೯೬೭ರಿಂದ ಎಲೆಕ್ಷನ್ ಆಗಿಲ್ಲವೆಂದು ಹೇಳಬಹುದು. ಆದರೆ ಇಡೀ ರಾಜ್ಯದಲ್ಲಿ ಎಷ್ಟು ಸಹಕಾರಿ ಸಂಸ್ಥೆಗಳಿಗೆ ಚುನಾವಣೆ ಆಗಿಲ್ಲವೆಂದು ಕೇಳಿದ್ದೀರಿ. ಇಡೀ ರಾಜ್ಯದಲ್ಲಿ ೨೫ ಸಾವಿರ ಸಹಕಾರ ಸಂಘಗಳಿವೆ. ಎಲ್ಲೆಲ್ಲಿ ಆಗಿದೆ, ಎಲ್ಲೆಲ್ಲಿ ಆಗಿಲ್ಲವೆಂದು ಹೇಳಬೇಕಾದರೆ ಸ್ವಲ್ಪ ಟೈಂ ಹಿಡಿಯುತ್ತದೆ. ಅರ್ಧ ಗಂಟೆ ಟೈಂ ಕೊಟ್ಟರೆ ಇದ್ದಂಥ ಮಾಹಿತಿಯಲ್ಲಿ ಉತ್ತರ ನೀಡುತ್ತೇನೆ. ಎಲ್ಲಾ ಪ್ರಶ್ನೆಗಳು ಮುಗಿದ ಮೇಲೆ ತೆಗೆದುಕೊಳ್ಳಿ.

ಅಧ್ಯಕ್ಷರು:- ಆಯಿತು.

ವಿಷಯ:- ಕೊಡಗು ಜಿಲ್ಲೆಯಲ್ಲಿ ಮಂಡಲಕಾರ್ಯದರ್ಶಿ ಹುದ್ದೆಗಳ ಭರ್ತಿ

ಚುಕ್ಕೆ ಗುರ್ತಿನ ಪ್ರಶ್ನೆ ಸಂ: ೪೫:- (೫೮೨)
ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ)
ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಅನೇಕ ಮಂಡಲ ಪಂಚಾಯತ್‌ಗಳಲ್ಲಿ ಕಾರ್ಯದರ್ಶಿಗಳಿಲ್ಲದೇ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ
(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಹೌದು.

ಕೊಡಗು ಜಿಲ್ಲೆಯಲ್ಲಿ ೬೫ ಮಂಡಲ ಪಂಚಾಯತಿಗಳಿದ್ದು ಅವುಗಳಲ್ಲಿ ೧೪ ಮಂಡಲ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆ ಖಾಲಿ ಇವೆ.

ವೃಂದ ಮತ್ತು ನೇಮಕಾತಿ ನಿಯಮಗಳನ್ನು ಇತ್ತೀಚೆಗೆ ರಚಿಸಿದ್ದು ಖಾಲಿ ಇರುವ ಮಂಡಲ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಗಳನ್ನು ತುಂಬುವ ಕಾರ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ.ಎಂ. ಬೆಳ್ಳಿಯಪ್ಪ:- ತಮ್ಮ ಉತ್ತರದಲ್ಲಿ ಕೊಡಗು ಜಿಲ್ಲೆಯಲ್ಲಿ ೧೪ ಮಂಡಲ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೀರಿ. ಎರಡನೆಯದಾಗಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಸೆಲೆಕ್ಷನ್ ಮಾಡಬೇಕೆಂದು ಹೇಳುತ್ತಿದ್ದೀರಿ. ನೇಮಕಾತಿ ವಿಷಯಕ್ಕೆ ಸಂಬಂಧಪಟ್ಟಹಾಗೆ ಕೆಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಫ್ರೇಂ ಆಗಿದೆಯೆ: ಅಥವಾ ಯಾವಾಗ ಮಾಡುತ್ತೀರಿ ಎಂದು ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ:- ಮಂಡಲ ಪಂಚಾಯತಿ ಕಾರ್ಯದರ್ಶಿಗಳ ೧೪ ಪೋಸ್ಟ್‌ಗಳು ಖಾಲಿ ಇದೆ ಎಂದು ಉತ್ತರ ಹೇಳಿದ್ದೇನೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್

ರೂಲ್ಸ್ ಪ್ರಕಾರ ೬೦ ಪರ್ಸೆಂಟ್ ಡೈರೆಕ್ಟ್ ರೆಕ್ರೂಟ್‌ಮೆಂಟ್, ೨೦ ಪರ್ಸೆಂಟ್ ರೆವಿನ್ಯೂ ಇಲಾಖೆಯಿಂದ ಡೆಪ್ಯೂಟೇಷನ್, ಬಾಕಿ ೨೦ ಪರ್ಸೆಂಟ್ ಎಕ್ ್ಸ-ಎಲೇಜ್ ಪಂಚಾಯತ್ ಸ್ಟ್ಯಾಪ್ ಅನ್ನು ನೇಮಕ ಮಾಡಬೇಕೆಂದು ಇದೆ. ಎಕ್ಸ್-ಎಲೇಜ್ ಪಂಚಾಯತ್ ಸ್ಟ್ಯಾಪ್ ೨೦ ಪರ್ಸೆಂಟ್ ಏನಿದೆ ಅದರಲ್ಲಿ ೩೪೭ ಪೋಸ್ಟ್‌ಗಳನ್ನು ಈಗಾಗಲೇ ಫಿಲ್‌ಅಪ್ ಮಾಡಲಾಗಿದೆ. ಇನ್ನೂ ೧೮೩ ಪೋಸ್ಟ್‌ಗಳನ್ನು ಫಿಲ್‌ಅಪ್ ಮಾಡಬೇಕಾಗಿದೆ. ನಿಮಗೆ ಸಂಬಂಧಪಟ್ಟಹಾಗೆ ಅಸೆಂಬ್ಲಿ ಸೆಷನ್ ,ಆದ ತಕ್ಷಣ ಈ ೧೪ ಪೋಸ್ಟ್‌ಗಳನ್ನು ನಾವು ಫಿಲ್‌ಅಪ್ ಮಾಡುತ್ತೇವೆ.

ವಿಷಯ:- ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಎಲ್ಲೂರು ಗ್ರಾಮದ ಅಭಿವೃದ್ಧಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೪೬:- (೫೯೩)
ಶ್ರೀ ಬಿ.ಐ.ಪಾಟೀಲ್(ಮಚ್ಚಗಾವ್)
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ, ಬೆಳಗಾಂ ತಾಲ್ಲೂಕಿನ ಎಲ್ಲೂರು ಗ್ರಾಮದ ಅಭಿವೃದ್ಧಿಯನ್ನು ತೆಗೆದುಕೊಂಡಿರುವುದು ನಿಜವೆ?
ಆ) ಹಾಗಿದ್ದಲ್ಲಿ, ಅದನ್ನು ಅನುಷ್ಠಾನಗೊಳಿಸುವಲ್ಲಿ ಇದುವರೆಗೂ ಹಾಗಿರುವ ಪ್ರಗತಿ?
ಇ) ವಿಳಂಬವಾಗಿರುವುದಕ್ಕೆ ಕಾರಣಗಳು?
ಈ) ಚಾಲ್ತಿ ವರ್ಷದಲ್ಲಿ ಅಭಿವೃದ್ಧಿ ಚಟುವಟಿಕೆಯನ್ನು ಸರ್ಕಾರವು ತೆಗೆದುಕೊಳ್ಳುವುದೆ?

ಶ್ರೀ ಎಂ.ವೈ. ಘೋರ್ಪಡೆ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು)

ಇಲ್ಲ ಈ ಗ್ರಾಮವು, ವಿಶ್ವಬ್ಯಾಂಕ್ ನೆರವಿನಿಂದ ಉದ್ದೇಶಿಸಿರುವ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಯಡಿಯಲ್ಲಿ ಸೇರಿಸಿರುವುದಿಲ್ಲ.

-ಅನ್ವಯಿಸುವುದಿಲ್ಲ-
-ಅನ್ವಯಿಸುವುದಿಲ್ಲ-
-ಅನ್ವಯಿಸುವುದಿಲ್ಲ-

SRI B.I.PATIL:- I have asked specific question as to whether it is a fact that Yellur village in Belgaum Taluk has been taken up for development under the World Bank Scheme, to which the Hon'ble Minister has answered "No". For all my questions the answer given is "No" Whether there is World Bank assisted Scheme to develop rural areas particularly the villages in Karnataka? According to my knowledge, there was a survey conducted in our area for giving World Bank assistance to rural areas. The amount approximately was Rs.50 lakhs per village for the purpose of roads, sanitation etc., in villages. In my opinion, the Government is misleading the House. I therefore, want a correct answer from the Government.